# ಎತ್ತಿನ ಗಾಣದೊಂದಿಗೆ ಸಾಫ್ಟ್‌ವೇರ್ ಸ್ನೇಹಿತರ ಯಶಸ್ವಿ ಯಾನ !

**ಎಸ್. ಜೆ. ಹೇಮಂತ್** ☎: 9663716261
ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ, ಮೈಸೂರು **ಮಿಂಚಂಚೆ:** hemantsj96@gmail.com

ಇತ್ತೀಚಿನ ದಿನಗಳಲ್ಲಿ ದೇಶವ್ಯಾಪಿ ತನ್ನ ಬೃಹತ್ ಜಾಲವನ್ನು ಹೆಣೆದುಕೊಂಡಿರುವ ರಿಫೈನ್ಡ್ ಆಯಿಲ್ ಗಳೆಂಬ ವಿಷಕಾರಕ ಎಣ್ಣೆಗಳು ಪೆಟ್ರೋಲಿಯಂ ಉತ್ಪನ್ನದೊಂದಿಗೆ ಉಪಉತ್ಪನ್ನವಾಗಿ ಹೊರಹೊಮ್ಮುವ ವೈಟ್ ಆಯಿಲ್ ಎಂಬ ಬಣ್ಣ, ವಾಸನೆ ಹಾಗೂ ರುಚಿ ರಹಿತ ವಿಷದೊಂದಿಗೆ ಮಿಶ್ರಣವಾಗಿ ಕಲಬೆರಕೆಯಾಗಿ ಕಾರ್ಪೋರೇಟ್ ವ್ಯವಸ್ಥೆಯಡಿ ಕುಗ್ರಾಮಗಳಿಗೂ ಸಹ ಲಗ್ಗೆಯಿಟ್ಟಿದೆ. ಈ ಎಣ್ಣೆಗಳು ಮನುಷ್ಯನ ದೇಹದಲ್ಲಿ ಕೆಟ್ಟ ಕೊಬ್ಬು ಹೆಚ್ಚಾಗಿಸಿ ರಕ್ತನಾಳಗಳನ್ನು ಕಿರಿದಾಗಿಸಿ ಬಿ.ಪಿ, ಶುಗರ್, ಹೃದಯಾಘಾತ, ಕ್ಯಾನ್ಸರ್ ನಂತಹ ಮಾರಕ ರೋಗಗಳನ್ನು ಬೇರೂರುವಂತೆ ಮಾಡಿ ಮನುಷ್ಯರ ಪ್ರಾಣವನ್ನು ಹೀರುತ್ತಿವೆ. ಇಂತಹ ನಾನಾ ಕಂಪೆನಿಗಳ ವಿಷಕಾರಕ ಎಣ್ಣೆಗಳು ಒಂದೆಡೆಯಾದರೇ, ಇಲ್ಲಿ ಈ ಯುವ ಕೃಷಿಕರು ಲಕ್ಷಾಂತರ ರೂಪಾಯಿ ಸಂಬಳ ನೀಡುತ್ತಿದ್ದ ಸಾಫ್ಟ್‌ವೇರ್ ಕಂಪನಿ ಕೆಲಸವನ್ನು ಬಿಟ್ಟು ಭಾರತ ದೇಶದ ಮೂಲ ಅಡುಗೆ ಎಣ್ಣೆಗಳ ಉತ್ಪಾದನಾ ಕೇಂದ್ರ ಹಾಗೂ ಪ್ರಸ್ತುತ ಸನ್ನಿವೇಶದಲ್ಲಿ ಕಾರ್ಪೋರೇಟ್ ವಲಯದ ಕಪಿಮುಷ್ಠಿಗೆ ಸಿಲುಕಿ ರಾಸಾಯನಿಕ ವಿಷಯುಕ್ತ ಎಣ್ಣೆಗಳ ಆರ್ಭಟದಲ್ಲಿ ಕಣ್ಮರೆಯಾಗಿ ಹೋಗುತ್ತಿರುವ ಮರದ ಎತ್ತಿನ ಗಾಣಗಳ ಘಟಕು ತೆರೆಯಲು ಮುಂದಾಗಿದ್ದಾರೆ. **ಇಡೀ ದೇಶದ ಪ್ರತಿ ಹಳ್ಳಿ ಹಳ್ಳಿಗಳಿಗೂ ಈ ಗಾಣದ ಎಣ್ಣೆಯ ಹಾಗೂ ದೇಸೀ ಹಸುಗಳ ಮಹತ್ವವನ್ನು ತಿಳಿಸಿ ಪ್ರತಿ ಹಳ್ಳಿಗಳಿಗೂ ಎರಡೆರಡು ಗಾಣದ ಘಟಕಗಳನ್ನು ಸ್ಥಾಪಿಸುವ ಮೂಲಕ ಯುವ ಕೃಷಿಕರಿಗೂ ಹಾಗೂ ಗ್ರಾಮೀಣ ಭಾಗದ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿ ಗ್ರಾಮಸ್ವರಾಜ್ಯ ಹಾಗೂ ಗ್ರಾಮ ಸ್ವಾವಲಂಬನೆಯ ಗಾಂಧೀಜಿಯವರ ಕನಸನ್ನು ನನಸು ಮಾಡಬೇಕೆಂದು ಅವಿರತವಾಗಿ ಹುಮ್ಮಸ್ಸಿನಿಂದ ಶ್ರಮಿಸುತ್ತಿದ್ದಾರೆ ಯುವಕರಾದ ನವೀನಕುಮಾರ್, ಯೋಗೇಶ್ ಮತ್ತು ಮಹೇಶ್.**

➢ **ಪರಿಚಯ**

ನವೀನ್‌ಕುಮಾರ್ ಮೂಲತಃ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕೇರಳಾಪುರ ಗ್ರಾಮದವರಾಗಿದ್ದು ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಿಂದ ಬಂದಂತಹವರು. ಇವರು ಎಲೆಕ್ಟ್ರಿಕಲ್ಸ್ ಅಂಡ್ ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ತಮ್ಮ ಇಂಜಿನಿಯರಿಂಗ್ ಪದವಿ ಮುಗಿಸಿ ನಂತರ ಎಂ.ಬಿ.ಎ ಪೂರ್ಣಗೊಳಿಸಿ ABV Ltd., RTTS, ಸೆಂಟ್ರೋಮ್ ಎಲೆಕ್ಟ್ರಿಕಲ್ಸ್ ಲಿಮಿಟೆಡ್ ನಂತಹ ಹೆಸರಾಂತ ಖಾಸಗಿ ಕಂಪನಿಗಳಲ್ಲಿ ಹಗಲು ರಾತ್ರಿಯೆನ್ನದೇ ಸೂರ್ಯನ ಕಿರಣಗಳನ್ನೂ ನೋಡಲಾಗದಂತಹ ಪರಿಸ್ಥಿತಿಯಲ್ಲಿ ಸುಮಾರು 14 ವರ್ಷಗಳ ಕಾಲ ಒತ್ತಡದಲ್ಲಿ



ಕೆಲಸಮಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ದಿನ ಹೀಗೇ ಊಟದ ವಿರಾಮದ ಸಮಯದಲ್ಲಿ ತಮ್ಮ ಮೇಲಾಧಿಕಾರಿಗಳೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ, ನಾವು ಅಂದರೆ ಏನು? ನಮ್ಮ ಹುಟ್ಟಿನ ಉದ್ದೇಶವಾದರೂ ಏನು? ನಾವು ಏತಕ್ಕಾಗಿ ಹುಟ್ಟಿದ್ದೇವೆ.? ನಾವೂ ಎಲ್ಲರಂತೆ ಏಕೆ ಈ ಯಾಂತ್ರಿಕ ಜೀವನ ಶೈಲಿಯಲ್ಲಿ ನರಳಾಡುತ್ತಿದ್ದೇವೆ? ನಾವು ಮಾಡುತ್ತಿರುವುದು ಸರಿಯೇ? ಎಂಬೆಲ್ಲಾ ಪ್ರಶ್ನೆಗಳಗ್ಗೆ ಹೀಗೇ ಯೋಚಿಸುತ್ತಿರುವಾಗ ಇವರೊಂದಿಗೆ ಇನ್ನಿಬ್ಬರು ಸಹೋದ್ಯೋಗಿ ಸ್ನೇಹಿತರಾದ **ಬೆಂಗಳೂರಿನ ಯೋಗೇಶ್ ಮತ್ತು ಚಾಮರಾಜನಗರದ ಮಹೇಶ್ ಸಹ ಧ್ವನಿಗೂಡಿಸಿ,** ಅವರೂ ಸಹ ಇದೇ ಇಂಗಿತವನ್ನು ವ್ಯಕ್ತಪಡಿಸಿದರು. ತಕ್ಷಣವೇ ಈ ಮೂವರು ಮಾಡಿದ ಮೊದಲನೇ ಕೆಲಸ ತಮ್ಮ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದು. ನಂತರ ಇವರ ಪರ್ಯಟನೆ ಆರಂಭವಾಯಿತು. ಈ ಮೂವರು ತಮ್ಮ ತಮ್ಮ ಹುಟ್ಟಿಗೆ ಸಾರ್ಥಕತೆಯನ್ನರಸಿ ತಮ್ಮ ಹುಟ್ಟಿನ ಉದ್ದೇಶವನ್ನರಿಯಲು ಅನ್ವೇಷಣೆ ಮಾಡುತ್ತಾ ಹೊರಟರು. ಕೃಷಿ ಮಾಡಬೇಕೆಂದು ಕೆ.ಆರ್.ನಗರ ತಾಲೂಕಿನ ಅಡಗನಹಳ್ಳಿ ಗ್ರಾಮದಲ್ಲಿ 2 ಎಕರೆ ಜಮೀನು ಖರೀದಿ ಮಾಡಿದರು. ನಂತರ ದಾರಿಯಲ್ಲಿ ಸಿಕ್ಕ ಸಿಕ್ಕ ಹೊಲ, ಗದ್ದೆ, ಜಮೀನುಗಳನ್ನು ನೋಡ ನೋಡುತ್ತಾ ಹೀಗೆ ಅವರಲ್ಲಿ ಚರ್ಚೆಯೊಂದು ಶುರುವಾಯಿತು.ಈ ಹಿಂದೆ ನಮ್ಮ ಪೂರ್ವಜರು ಯಾವ ರೀತಿಯ ವ್ಯವಸಾಯ ಕ್ರಮಗಳನ್ನು ಅನುಸರಿಸುತ್ತಿದ್ದರು? ಅವರುಗಳ ಧೀರ್ಘಾಯುಷ್ಯದ ಗುಟ್ಟೇನು? ಅವರುಗಳು ದಿನನಿತ್ಯ ಉಪಯೋಗಿಸುತಿದ್ದ ಪದಾರ್ಥಗಳ ಮೂಲ ಯಾವುದಿರಬಹುದು ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೊರಟರು. ಹೀಗೆ ನಡೆಯುತ್ತಿದ್ದಂತೆ ಒಂದು ದಿನ ಒಂದು ಸ್ಥಳದಲ್ಲಿ ಕೆಲವು ಡ್ರಮ್ ಗಳಿಲ್ಲಿದ್ದ ಎಣ್ಣೆಯನ್ನು ತಮಗೆ ಬೇಕಾದ ಕಂಪನಿಗಳ

ಲೇಬಲ್ ಅಂಟಿಸಿದ ಟಿನ್ ಗಳಿಗೆ ಬದಲಾಯಿಸಿ ಅದನ್ನು ಪ್ಯಾಕ್ ಮಾಡಿ ಕಳುಹಿಸುತ್ತಿದ್ದ ದೃಶ್ಯ ಇವರ ಕಣ್ಣಿಗೆ ಬಿತ್ತು.ಆಗ ಅಲ್ಲಿನ ಕೆಲಸಗಾರರನ್ನು ವಿಚಾರಿಸಿದಾಗ ಈ ಎಣ್ಣೆಗಳನ್ನು ನಮ್ಮ ಮನೆಗಳಿಗೆ ಬಳಸುವುದಿಲ್ಲ, ಬದಲಾಗಿ ಹೊರಗಡೆ ಮಾರುಕಟ್ಟೆಗೆ ಕಳುಹಿಸಲಾಗುತ್ತದೆ ಎಂದು ತಿಳಿಸಿದರು.

### ➢ ಉದ್ದೇಶ

ಆಗ ಇವರಲ್ಲಿ ಬಂದ ವಿಚಾರ, ಈ ರಾಸಾಯನಿಕಗಳನ್ನು ಉಪಯೋಗಿಸುತ್ತಿರುವುದರಿಂದ ಜನಸಾಮಾನ್ಯರಿಗಾಗುತ್ತಿರುವ ಉಪಯೋಗವಾದರೂ ಏನು? ಯಾವ ಪುರುಷಾರ್ಥಕ್ಕೆ ಈ ಉತ್ಪನ್ನಗಳು ಮಾರುಕಟ್ಟೆಗೆ ಲಗ್ಗೆಯಿಟ್ಟಿವೆ? ಇವುಗಳಿಂದ ಕೆಡುಕುಗಳೇ ಹೆಚ್ಚಾಗಿರುವಾಗ ಈ ಪದಾರ್ಥಗಳ ಉಪಯೋಗವನ್ನೇಕೆ ಮಾಡಬೇಕು?ಎಂಬ ಪ್ರಶ್ನೆಗಳನ್ನು ಹಾಕಿಕೊಂಡು ಮೂವರು ಸೇರಿ ಒಂದು ನಿರ್ಧಾರ ಮಾಡಿದರು.ಈ ವಿಷಯುಕ್ತ ಪದಾರ್ಥಗಳಿಂದಾಗುವ ದುಷ್ಪರಿಣಾಮಗಳನ್ನು ಹತ್ತಿಕ್ಕಲು ಸಾವಯುವ ಪದಾರ್ಥಗಳ ಹೆಚ್ಚೆಚ್ಚು ಉತ್ಪಾದನೆ ಬಹಳ ಅವಶ್ಯಕವಾಗಿದೆ ಹಾಗೂ ಮುಖ್ಯವಾಗಿ ಜನತೆಗೆ ಈ ಬಗ್ಗೆ ಅರಿವು ಮೂಡಿಸಬೇಕಿದೆ ಎಂದು ತೀರ್ಮಾನಿಸುತ್ತಿದ್ದ ಸಂದರ್ಭದಲ್ಲಿ ಇವರಿಗೆ ಹೊಳೆದದ್ದು, ಮನುಷ್ಯನ ಪರಿಪೂರ್ಣ ಆರೋಗ್ಯಯುತ ಬೆಳವಣಿಗೆಗೆ ಅವಶ್ಯಕವಾದ ಅಂಶಗಳಾವುವು? ಜೀವಸತ್ವಗಳು, ಪಿಷ್ಠ, ಆರೋಗ್ಯಯುತ ಕೊಬ್ಬು, ಈ ಮೂರು ಅಂಶಗಳು ಬಹಳ ಹೆಚ್ಚಿನ ಪರಿಣಾಮ ಬೀರಬಲ್ಲವು. ಅದರಲ್ಲೂ ಆರೋಗ್ಯಯುತವಾದ ಕೊಬ್ಬು ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಜನರಲ್ಲಿ ಗೋಚರಿಸುತ್ತಿಲ್ಲ, ಬದಲಾಗಿ ಹೆಚ್ಚೆಚ್ಚು ಕೆಟ್ಟ ಕೊಬ್ಬಿನಾಂಶವು ಶೇಖರಣೆಯಾಗಿ ತರಹೇವಾರು ರೋಗಗಳಿಗೆ ಆಮಂತ್ರಣ ನೀಡುತ್ತಿವೆ. ಹಾಗಾದರೇ ಈ ಒಳ್ಳೆಯ ಕೊಬ್ಬುಗಳ ಆಗರ ಯಾವುದು? ಯಾವ ಉತ್ಪನ್ನಗಳಿಂದ ಇವುಗಳನ್ನು ಪಡೆಯಬಹುದು ಎಂದು ಆಲೋಚಿಸುವುದಾದರೇ ಪ್ರಮುಖವಾಗಿ ಶುದ್ಧವಾದ ಬೆಣ್ಣೆ, ದಿನ ನಿತ್ಯ ಉಪಯೋಗಿಸುವ ಆರೋಗ್ಯಯುತವಾದ ಅಡುಗೆ ಎಣ್ಣೆ, ಮತ್ತು ತುಪ್ಪ. ಈ ಪದಾರ್ಥಗಳ ನಿಯಮಿತ ಸೇವನೆಯಿಂದ ದೇಹದಲ್ಲಿ ಉಪಯುಕ್ತವಾದ ಕೊಬ್ಬು ಉತ್ಪಾದನೆಯಾಗಿ ದೇಹದ ದಿನನಿತ್ಯದ ಚಟುವಟಿಕೆಗಳಿಗೆ ಸಹಕಾರಿಯಾಗುತ್ತದೆ.

ಅದರಲ್ಲೂ ಅಡುಗೆ ಎಣ್ಣೆ ದಿನನಿತ್ಯ ನಮ್ಮ ಆಹಾರಗಳಲ್ಲಿ ತಪ್ಪದೇ ಬಳಸುವ ಅವಶ್ಯಕ ಉತ್ಪನ್ನ. ಹಾಗೂ ಅತೀ ಹೆಚ್ಚು ಕಲಬೆರಕೆಯಾಗುತ್ತಿರುವ ಉತ್ಪನ್ನವೂ ಹೌದು. ಈ ಪದಾರ್ಥದಲ್ಲಿ ಶೇ 90 ಅನ್ಯ ಪದಾರ್ಥಗಳು ಹಾಗೂ ವಿಷಾಂಶಗಳ ಕಲಬೆರಕೆಯಾಗುತ್ತಿದೆ ಎಂಬುದನ್ನು ಮನಗಂಡು ನವೀನ್ ಮತ್ತು ಸ್ನೇಹಿತರು ಈ ವಿಷಯದ ಮೇಲೆಯೇ ಲಕ್ಷ್ಯವಿಟ್ಟು ಕೆಲಸ ಮಾಡುತ್ತಾ ವಿವಿಧ ವಿಧಾನಗಳ ಮೂಲಕ ಬೀಜದಿಂದ ಎಣ್ಣೆ ತೆಗೆಯುವ ಪದ್ಧತಿಗಳಾದ ಸ್ಕ್ರೂ ಪ್ರೆಸ್ಸಿಂಗ್, ಹೈಡ್ರಾಲಿಕ್ ಪ್ರೆಸಿಂಗ್, ಮೆಟಲ್ ರೋಟರಿ, ವುಡನ್ ರೋಟರಿ, ರಿಫೈನ್ಡ್ ಹಾಗೂ ಎತ್ತಿನ ಗಾಣಗ ಬಗ್ಗೆ ತಿಳಿದುಕೊಳ್ಳಲಾರಂಭಿಸಿದರು.ಆಗ ದಾರಿಯಲ್ಲಿ ಸಿಗುವ ಹಳ್ಳಿಗಳಿಗೆ ಭೇಟಿ ನೀಡಿ ಹಿರಿಯರು, ವಯಸ್ಕರು, ಅಜ್ಜ ಅಜ್ಜಿಯರೊಂದಿಗೆ ಸಮಾಲೋಚಿಸಿ ಈ ಹಿಂದೆ ಅವರುಗಳು ಅಡುಗೆಗಾಗಿ ಬಳಸುತ್ತಿದ್ದ ಎಣ್ಣೆ ಯಾವುವೆಂದು ಹಾಗೂ ಆ ಎಣ್ಣೆ ಮೂಲ ಯಾವುದೆಂದು ಕೇಳಿದಾಗ ಆ ಹಿರಿಯರಿಂದ ಬಂದ ಉತ್ತರ, **ಎತ್ತಿನ ಗಾಣದ ಎಣ್ಣೆ**

### ➢ ದೇಸಿರಿ ನ್ಯಾಚುರಲ್ಸ್ ಸ್ಥಾಪನೆ

ಆಗ ಶುರುವಾಯಿತು ಇವರ ನಿಜವಾದ ಎತ್ತಿನ ಗಾಣದ ಪಯಣ. ರಾಜ್ಯಾದ್ಯಂತ ಇರುವ ಎತ್ತಿನ ಗಾಣಗಳ ಬಗ್ಗೆ ಅರಿಯಬೇಕೆಂದು ಪರ್ಯಟನೆ ಆರಂಭಿಸಿದರು. ಆದರೆ ರಾಜ್ಯದಲ್ಲಿ ಈಗಾಗಲೇ ಅಳಿವಿನಂಚಿನಲ್ಲಿರುವ ಈ ಗಾಣಗಳ ಸುಳಿವು ಸಿಗಲಿಲ್ಲವಾದ್ದರಿಂದ ಇವರ ಪ್ರಯತ್ನ ಸಫಲವಾಗಲಿಲ್ಲ ಇದಿಷ್ಟಕ್ಕೇ ಬಿಡದ ನವಿನ್ ಬಳಗ ಪಕ್ಕದ ಆಂಧ್ರಕ್ಕೆ ತೆರಳಿ ಅಲ್ಲಿ ಓರ್ವ ಶಿಲ್ಪಿಯ ಸಹಕಾರದಿಂದ ಅಲ್ಲಿನ ಮರದ ಎತ್ತಿನ ಗಾಣಗಳ ಬಗ್ಗೆ ಮಾಹಿತಿ ಪಡೆದು ತಾವೇ ಸ್ವತಃ ಶಿಲ್ಪಿಯವರಿಂದ ಒಂದು ಮರದ ಗಾಣ ಸಿದ್ಧಪಡಿಸಿಕೊಂಡು ಮೊದಲ ಬಾರಿಗೆ ಎಣ್ಣೆ ತೆಗೆಯಲು ಪ್ರಾರಂಭಿಸುತ್ತಾರೆ.ಆದರೆ ಬೆಳಿಗ್ಗೆಯಿಂದ ಸಂಜೆವರೆಗೂ ಗಾಣ ಆಡಿಸಿದರೂ ಗಾಣದಲ್ಲಿ ಎಣ್ಣೆಯೇ ಬರುವುದಿಲ್ಲ. ಇದರಿಂದ ನವೀನ್ ಮತ್ತು ಸ್ನೇಹಿತರು ದಿಗ್ಭ್ರಾಂತರಾಗಿ ಯೋಚಿಸಲಾರಂಬಿಸುತ್ತಾರೆ ಹಾಗೂ ಸಮಸ್ಯೆ ಪರಿಹಾರ ಕಂಡು ಕೊಳ್ಳುತ್ತಾರೆ. ಯಾವುದೇ ಗಾಣವಾದರೂ ಸಹ ಹದವಾದ ಅರಿತವಿಲ್ಲದೇ ಎಣ್ಣೆ ಬಿಡುವುದಿಲ್ಲ, ಹೀಗಾಗಿ ಆ ಹದವನ್ನು ತಿಳಿಯದೇ ನವೀನ್ ಮತ್ತು ಸ್ನೇಹಿತರು ಬಹಳ ಹಣ, ಸಮಯ ಹಾಗೂ ಶಕ್ತಿಯನ್ನು ವ್ಯಯ ಮಾಡಿದರು. ಆದರೂ ಛಲ ಬಿಡದೇ ಹದವರಿತು ಗಾಣದಿಂದ ಎಣ್ಣೆಯನ್ನೇನೋ ತೆಗೆದರು, ಆದರೆ ಇವರ ಗಾಣದ ಎಣ್ಣೆಯ ನಿರ್ವಹಣಾ ವೆಚ್ಚಗಳೆಲ್ಲಾ ಸೇರಿ ಒಂದು ಲೀಟರ್ ಎಣ್ಣೆಗೆ ರೂ. 350 ಆಯಿತು. ಆದರೇ ಮಾರುಕಟ್ಟೆಯಲ್ಲಿ ರೂ. 80ಕ್ಕೆ 1ಲೀ ಎಣ್ಣೆ ಸಿಗುತ್ತಿದೆ. ಹೀಗಾದಲ್ಲಿ ಗ್ರಾಹಕರಿಗೆ ಈ ವಿಷ ಮುಕ್ತ ಗಾಣದ ಎಣ್ಣೆ ಬಗ್ಗೆ ಅರಿವು ಮೂಡಿಸುವುದಾದರೂ ಹೇಗೆ, ಎಂಬ ಚಿಂತೆ ಇವರಿಗೆ ಕಾಡತೊಡಗಿತು. ಕೂಡಲೇ ಹೊಳೆದದ್ದೇ ಒಂದು ಉಪಾಯ. ಈ ಮೂವರು ಸ್ನೇಹಿತರೂ ಸೇರಿ ಕೆಲವು ಆರೋಗ್ಯ ಸಮಸ್ಯೆಗಳಿರುವ 10 ರಿಂದ 15 ಜನ ವ್ಯಕ್ತಿಗಳನ್ನು ಆಯ್ಕೆಮಾಡಿ ಅವರಿಗೆ ತಮ್ಮ ಗಾಣದ ಎಣ್ಣೆಯನ್ನು ಒದಗಿಸಿದರು. ಒಂದೂವರೆ ತಿಂಗಳ ನಂತರ ಅವರೆಲ್ಲರೂ ಇವರ ಬಳಿ ಬಂದು ನೀವು ಒದಗಿಸಿದ ಎಣ್ಣೆ ಸೇವನೆಯಿಂದ ನಮ್ಮ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ, ಒಳ್ಳೆಯ ಅಂಶಗಳಿವೆ ಇದರಲ್ಲಿ ನಿಮ್ಮ ಪ್ರಯತ್ನ ಅಮೂಲ್ಯವಾದ್ದು, ಖಂಡಿತ ನಿಮಗೆ ಯಶಸ್ಸು ಸಿಗುವುದು, ಈ ಯೋಜನೆಯನ್ನು ಮುಂದುವರೆಸಿ

ಎಂದು ಇವರಿಗೆ ಧೈರ್ಯ ತುಂಬಿ ಹುರುಪು ನೀಡಿದರು.ಇವರು ಆಡಿದ ಈ ವಿಶ್ವಾಸದ ನುಡಿಗಳು ನವೀನ್ ಮತ್ತು ಸ್ನೇಹಿತರಿಗೆ ಇನ್ನಷ್ಟು ಸ್ಫೂರ್ತಿ ತುಂಬಿದವು. ಮುಂದುವರೆದು ಯಾವುದೇ ಒಂದು ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುವ ಮುನ್ನ ಕೆಲವು ನೀತಿ ನಿಯಮಗಳಿರುತ್ತವೆ, ಅವುಗಳೆಲ್ಲವನ್ನು ವ್ಯವಸ್ಥಿತವಾಗಿ ಪೂರ್ಣಗೊಳಿಸಿ ತಮ್ಮದೇ ಆದ **"ದೇಸಿರಿ ನ್ಯಾಚುರಲ್ಸ್" (ರಾಸಾಯನಿಕ ಮುಕ್ತ ಊಟದ ತಟ್ಟೆ) ಎಂಬ ವಿನೂತನ ಶೀರ್ಷಿಕೆಯೊಂದಿಗೆ ತಮ್ಮ ಉತ್ಪನ್ನಗಳನ್ನು** ಬಿಡುಗಡೆಗೊಳಿಸಿದರು. ಇನ್ನು ಈ ಗಾಣದಲ್ಲಿ ಕುಸುಬೆ ಎಣ್ಣೆ, ಕೊಬ್ಬರಿಎಣ್ಣೆ, ಕಡಲೇಕಾಯಿ ಎಣ್ಣೆ, ಎಳ್ಳೆಣ್ಣೆ, ಹುಚ್ಚೆಳ್ಳು ಎಣ್ಣೆ, ಹರಳೆಣ್ಣೆ ಗಳನ್ನು ತೆಗೆಯುತ್ತಿದ್ದಾರೆ.ಹಾಗೂ ಇವುಗಳಿಂದ ಬಂದ ಉಪಉತ್ಪನ್ನಗಳಾದ ಕಡಲೇಕಾಯಿ ಹಿಂಡಿ, ಹುಚ್ಚೆಳು ಹಿಂಡಿ, ಎಳ್ಳಿಂಡಿ, ಕುಸುಬೆ ಹಿಂಡಿಗಳನ್ನು ಮಾರಾಟ ಮಾಡುತ್ತಾರೆ ಈ ಎಲ್ಲಾ ಹಿಂಡಿಗಳನ್ನೂ ಮಿಶ್ರಣ ಮಾಡಿ ಅದಕ್ಕೆ ಮುಸುಕಿನ ಜೋಳವನ್ನೂ ಸೇರಿಸಿ **"ಪಶು ಗ್ರಾಸ"** ಎಂಬ ಮೌಲ್ಯಭರಿತ ಪಶು ಆಹಾರವನ್ನೂ ಸಿದ್ದಗೊಳಿಸಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಹಸುಗಳ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದು ಹಾಲಿನ ಇಳುವರಿ ಹೆಚ್ಚಾಗಿದೆ. ತಮ್ಮ ಎರಡು ಎಕರೆ ಜಮೀನಿನಲ್ಲಿ ವಿಧಾನದಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದಿರುವ ಪಪ್ಪಾಯ, ಕಾಳು ಮೆಣಸು, ತೆಂಗು, ಅಡಿಕೆ, ನುಗ್ಗೆ, ಸೀಬೆ, ಬಾಳೆ, ತೇಗ, ಸಿಲ್ವರ್, ಶುಂಠಿ, ಅರಿಶಿನ, ನವಣೆ, ಸಾಮೆ, ಕೊರಲೆ, ಹಾರಕ, ಬರಗು, ಅಲಸಂದೆ, ಉದ್ದು ಹೀಗೆ ಹತ್ತು ಹಲವು ಬೆಳೆಗಳನ್ನು ತಮ್ಮ ಮನೆ ಬಳಕೆಗೆ ಉಪಯೋಗಿಸಿಕೊಂಡು ಬೇಡಿಕೆಯ ಇತರೆ ಗ್ರಾಹಕರಿಗೂ ಕಳುಹಿಸುತ್ತಿದ್ದಾರೆ. **ಮೈಸೂರಿನ ರಾಮಾನುಜಾ ರಸ್ತೆಯಲ್ಲಿ ತಮ್ಮದೊಂದು ಔಟ್ ಲೆಟ್ ಮಾಡಿರುವ ನವೀನ್ ಮತ್ತು ಸ್ನೇಹಿತರು ಸ್ಥಳೀಯವಾಗಿ ಮೈಸೂರಿನ ಜನತೆಗೆ ತಮ್ಮ ಉತ್ಪನ್ನಗಳನ್ನು ತಲುಪಿಸುವ ವ್ಯವಸ್ಥೆ ಮಾಡಿಕೊಂಡಿದ್ದಾರೆ.**

### ➢ ದೇಸಿರಿ ನ್ಯಾಚುರಲ್ಸ್‌ನ ವಿಸ್ತಾರ

ಜೊತೆಗೆ Pan India (ದೇಶದ ಯಾವುದೇ ಸ್ಥಳಗಳಿಗೂ ತಮ್ಮ ಉತ್ಪನ್ನಗಳನ್ನು ತಲುಪಿಸುವ ವ್ಯವಸ್ಥೆ) ಮೂಲಕ ದೇಶ ಹಾಗೂ ವಿದೇಶಗಳಿಗೂ ಕೂಡಾ ತಮ್ಮ ಉತ್ಪನ್ನಗಳನ್ನು ತಲುಪಿಸುವ ಕಾರ್ಯವನ್ನೂ ಮಾಡುತ್ತಿದ್ದಾರೆ. ದೂರದ ಅಮೇರಿಕ ದೇಶದ ಇವರ ಗ್ರಾಹಕರೊಬ್ಬರು ಈ ಸಂಸ್ಥೆಗೆ ಉಚಿತವಾಗಿ ಮಾರಾಟದ ಒಂದು ಆ್ಯಪ್ Farm to me.in ಹಾಗೂ ಸಾಫ್ಟ್ ವೇರ್ ಸಿದ್ದಪಡಿಸಿಕೊಟ್ಟಿರುತ್ತಾರೆ. ಈ ಆ್ಯಪ್ ಅನ್ನು ಗೂಗಲ್ ಪ್ಲೇ ಸ್ಟೋರ್ ನಿಂದ ಗಾಹಕರು ಡೌನ್ ಲೋಡ್ ಮಾಡಿಕೊಂಡು ಇದರ ಮೂಲಕ ತಮ್ಮ ಬೇಡಿಕೆಯನ್ನು ನೀಡಿದಲ್ಲಿ ಆ ಬೇಡಿಕೆಗನುಸಾರವಾಗಿ ಗ್ರಾಹಕರಿಗೆ ಮನೆ ಬಾಗಿಲಿಗೇ ತಮ್ಮ ಉತ್ಪನ್ನಗಳು ಬಂದು ತಲುಪುವಂತೆ ವಿನೂತನ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಇದಲ್ಲದೇ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ರಾಜನ ಪಾಳ್ಯ ಗ್ರಾಮದಲ್ಲಿ ಆರು ಗಾಣಗಳನ್ನು ಅನುಷ್ಠಾನಗೊಳಿಸಿರುವ ನವೀನ್ ಮತ್ತು ಸ್ನೇಹಿತರು ಸದ್ಯ ಎರಡೂ ಘಟಕಗಳಿಂದ ಒಂದು ತಿಂಗಳಿಗೆ 6000 ಲೀ. ಎಣ್ಣೆಯನ್ನು ಉತ್ಪಾದನೆ ಮಾಡುತ್ತಿದ್ದಾರೆ. ಎರಡೂ ಘಟಕಗಳಲ್ಲಿ 60 ಜನ ಕೆಲಸಗಾರರು ಕಾರ್ಯನಿರ್ವಹಿಸುತ್ತಿದ್ದು, ಅವರೆಲ್ಲರ ಜೀವನಕ್ಕೆ ದಾರಿ ಮಾಡಿಕೊಟ್ಟ ಈ ದೇಸಿರಿ ನಾಚುರಲ್ಸ್ ಸಂಸ್ಥೆಯ ಬಗ್ಗೆ ಬಹಳ ಹೆಮ್ಮೆಯಿದೆ ಎಂಬುದು ನವೀನ್ ಹೆಮ್ಮೆಯ ನುಡಿ. ಈ ಘಟಕಗಳಲ್ಲಿ ಉತ್ಪಾದನೆಯಾಗುವ ಎಣ್ಣೆಗಳನ್ನು ಮೂರು ದಿನಗಳ ಕಾಲ ಸೋಲಾರ್ ಯುಕ್ತ ಉಷ್ಣ ಕೊಠಡಿಯಲ್ಲಿ ಶೇಖರಿಸಿಡುವ ಮೂಲಕ ಅದರಲ್ಲಿರುವ ನೀರಿನಂಶ ಹಾಗೂ ಶ್ಲೇಷಾಂಶಗಳನ್ನು ಬೇರ್ಪಡಿಸಿ ಎಣ್ಣೆಯನ್ನು ಕಂದುಬಣ್ಣಯುಕ್ತ ಗಾಜಿನ ಬಾಟಲಿಯಲ್ಲಿ ಪ್ಯಾಕಿಂಗ್ ಮಾಡುವುದರ ಮೂಲಕ ಪ್ಲಾಸ್ಟಿಕ್ ಮುಕ್ತ ಎಣ್ಣೆ ಉತ್ಪಾದನೆ ಮಾಡಿ ಇಲ್ಲಿಯವರೆಗೂ ಅಂದಾಜು 7–8 ಟನ್ ಪ್ಲಾಸ್ಟಿಕ್, ಭೂಮಿಗೆ ಸೇರುವುದನ್ನು ತಪ್ಪಿಸಿದೆ ಎನ್ನುವದು ಅವರ ಅಭಿಪ್ರಾಯ. ಈ ಘಟಕಗಳು ಪಶು ಆಧಾರಿತ ಗಾಣಗಳಾಗಿರುವುದರಿಂದ ದೇವಣಿ, ಮಲೆನಾಡು ಗಿಡ್ಡ, ಹಳ್ಳಿಕಾರ್, ಅಮೃತ ಮಹಲ್, ಕಿಲಾರಿ, ಗಿರ್, ಕಾಂಗ್ರೇಜ್, ಬರಗೂರ್ ಹೀಗೆ ಅಳಿವಿನಂಚಿನಲ್ಲಿರುವ ದೇಸೀ ತಳಿಗಳ ಸಂರಕ್ಷಣೆ ಮಾಡುವ ಮೂಲಕ ಇತರ ರೈತರಿಗೆ ಮಾದರಿಯಾಗಿ ಇಲ್ಲಿಯವರೆಗೆ ಸುಮಾರು ಎಂಭತ್ತು ಸಾವಿರದಿಂದ 1 ಲಕ್ಷ ಯೂನಿಟ್ ವಿದ್ಯುತ್ ಉಳಿತಾಯ ಮಾಡುವ ಮೂಲಕ ಸ್ಥಳೀಯ ದೇಶಿ ಸಂಪನ್ಮೂಲಗಳ ಅರ್ಥಪೂರ್ಣ ಉಪಯೋಗವಾಗಿದೆ ಎನ್ನುತ್ತಾರೆ ನವೀನಕುಮಾರ.

### ➢ ದೇಸಿರಿಯ ಚಿಂತನೆ ಹಾಗೂ ಆಶಯ

ಈ "ದೇಸಿರಿಯ" ಮೂಲ ಉದ್ದೇಶ ವಿಶಾಲವಾದದ್ದೂ **ಹಾಗೂ ವಿಸ್ತಾರವಾದದ್ದೂ ಕೂಡ. ಭಾರತದಲ್ಲಿನ ಒಟ್ಟು ಜನಸಂಖ್ಯೆ ಅಂದಾಜು 135 ಕೋಟಿ. ಒಂದು ಕುಟುಂಬದಲ್ಲಿ ಕನಿಷ್ಠ 4 ಜನರಿರುತ್ತಾರೆಂದು ಪರಿಗಣಿಸಿದರೂ 33 ಕೋಟಿ ಕುಟುಂಬಗಳಾಗುತ್ತವೆ. ಪ್ರತೀ ಕುಟುಂಬದ ಒಂದು ತಿಂಗಳ ಸರಾಸರಿ ಎಣ್ಣೆ ಬಳಕೆ 2 ಲೀ. ಆದರೂ ಭಾರತಕ್ಕೆ 67 ಕೋಟಿ ಲೀ ಖಾದ್ಯತೈಲದ ಅಗತ್ಯವಿದೆ. ನಮ್ಮ ಭಾರತೀಯ ಸಂಪ್ರದಾಯದ ಪ್ರಕಾರ ಎತ್ತಿನ ಗಾಣದಲ್ಲಿ ತೈಲವನ್ನು ತೆಗೆಯಲು ಪ್ರಾರಂಭಿಸಿದರೇ ದಿನಕ್ಕೆ ಬಹಳ ಎಂದರೆ ಒಂದು ಗಾಣದಿಂದ 20 ಲೀ. ಎಣ್ಣೆ ತೆಗೆಯಬಹುದು. ಅಂದರೆ ನಮ್ಮ ದೇಶಕ್ಕೆ ಅಗತ್ಯವಿರುವ 67 ಕೋಟಿ ಲೀ. ಗಳಷ್ಟು ಎಣ್ಣೆ ತೆಗೆಯಲು ನಮಗೆ ಹನ್ನೊಂದು ಲಕ್ಷದ ಇಪ್ಪತ್ತೈದು ಸಾವಿರ ಎತ್ತಿನ ಗಾಣಗಳು ಬೇಕಾಗುತ್ತವೆ. ಒಂದು ಅಂದಾಜಿನಂತೆ ಭಾರತದಲ್ಲಿ ಆರು ಲಕ್ಷದ ಐವತ್ತೊಂದು ಸಾವಿರ ಹಳ್ಳಿಗಳಿವೆ. ಒಂದೊಂದು ಹಳ್ಳಿಯಲ್ಲೂ ಎರಡೆರಡು ಗಾಣಗಳನ್ನು ಹಾಕಿದಲ್ಲಿ ಭಾರತದಲ್ಲೇ ಅಂದಾಜು 13 ಲಕ್ಷ ಗಾಣಗಳನ್ನು ಹಳ್ಳಿಗಳಲ್ಲೇ ಹಾಕಬಹುದು ಹಾಗೂ ಹಳ್ಳಿಗಳಿಂದಲೇ ನಾವು ಎಲ್ಲ ಜನರಿಗೂ ವಿಷಯುಕ್ತ ಎಣ್ಣೆಯನ್ನು ಸರಬರಾಜು ಮಾಡಬಹುದು. ಒಂದು ಗಾಣ ನೆಡೆಸಲು ಮೂರು ಜನರು ಬೇಕು. ಇಲ್ಲೇ ಇರುವುದು ಆಶ್ಚರ್ಯಕರ ಸಂಗತಿ, ಹನ್ನೊಂದು**

ಲಕ್ಷದ ಇಪ್ಪತ್ತೈದು ಸಾವಿರ ಗಾಣಗಳನ್ನು ನೆಡೆಸಲು ಅಂದಾಜು ಮೂವತ್ತ ಮೂರು ಲಕ್ಷದ ಎಪ್ಪತ್ತೈದು ಸಾವಿರ ಜನಗಳಿಗೆ ಉದ್ಯೋಗ ಸೃಷ್ಠಿಯಾಗುತ್ತದೆ. ಇವು ಎತ್ತು ಆಧಾರಿತ ಗಾಣಗಳಾಗಿರುವುದರಿಂದ ಪ್ರತಿಯೊಂದು ಗಾಣವನ್ನು ನೆಡೆಸಲು ಎರಡು ಎತ್ತುಗಳು ಅವಶ್ಯಕ. ಅಂದರೆ, ಅಷ್ಟೂ ಗಾಣಗಳನ್ನು ನೆಡೆಸಲು ಸುಮಾರು ಇಪ್ಪತ್ತೆರಡು ಲಕ್ಷದ ಐವತ್ತು ಸಾವಿರ ಎತ್ತುಗಳು  ಬೇಕು. ಈ ಮೂಲಕ ಕಟುಕರ ಮನೆ ಕದ ತಟ್ಟುವ ದನಕರುಗಳನ್ನು ಗಾಣಕ್ಕೆ ಬಳಸಿಕೊಳ್ಳುವ ದಿಶೆಯಲ್ಲಿ ಜಾನುವಾರುಗಳ ರಕ್ಷಣೆ ಆಗುವುದು. ಈ ಯೋಜನೆಯ ಅನುಷ್ಠಾನದಿಂದಾಗಿ ಮೂರು ಲಕ್ಷ ಕೋಟಿ ಹಣ ಹಳ್ಳಿಗಳಿಗೆ ಹರಿದು ಬರುತ್ತದೆ, ಈ ಹಣವು ಒಂದು ವರ್ಷದ ಭಾರತೀಯ ರಕ್ಷಣಾ ಬಜೆಟ್ ಅಥವಾ ಎರಡು ವರ್ಷಗಳ ರೇಲ್ವೇ ಬಜೆಟ್‌ಗೆ ಸಮನಾಗಿರುತ್ತದೆ!. ಹಳ್ಳಿಗಳ ಅಭಿವೃದ್ದಿಯಾದರೆ ದೇಶದ ಅಭಿವೃದ್ದಿ ಎಂಬ ಗಾಂಧಿಜೀಯವರ ನುಡಿಯಂತೆ ಪ್ರತಿ ಹಳ್ಳಿ ಹಳ್ಳಿಗಳೂ ದೇಶದ ಆದಾಯದ ಮೂಲವಾಗಬೇಕು.

ಹಳ್ಳಿ ಬಿಟ್ಟು ಪಟ್ಟಣಗಳನ್ನು ಸೇರುತ್ತಿರುವ ಯುವಕರು ಮತ್ತೆ ಹಳ್ಳಿಗಳೆಡೆಗೆ ಮುಖಮಾಡಿ ಇಂತಹ ಮಹತ್ಕಾರ್ಯದಲ್ಲಿ ತೊಡಗುವ ಮೂಲಕ ದೇಶದ ಜನರ ಮಾನಸಿಕ, ದೈಹಿಕ ಮತ್ತು ಆರ್ಥಿಕತೆಯ ಆರೋಗ್ಯವನ್ನು ಸುಸ್ಥಿತಿಯಲ್ಲಿಡಬೇಕೆಂಬುದು ನವೀನ್ ಮತ್ತು ಸ್ನೇಹಿತರ ಆಶಯ. ಪೂರ್ವಜರ ಎತ್ತಿನ ಗಾಣದ ಈ ಕಂಪು ಆದಷ್ಟು ಶೀಘ್ರವಾಗಿಯೇ ದೇಶದಲ್ಲೆಡೆ ಎಲ್ಲಾ ಹಳ್ಳಿಗಳಿಗೂ



ಪಸರಿಸಿ ರಾಸಾಯನಿಕಮುಕ್ತ ವಿಷಮುಕ್ತ ಖಾದ್ಯತೈಲ ಎಲ್ಲರಿಗೂ ಎಲ್ಲೆಡೆಯೂ ಸಿಗಬೇಕೆಂಬುದೇ ನಮ್ಮ ಆಶಯ. ಈ ದಿಶೆಯಲ್ಲಿ ಎಲ್ಲರೂ ಈ ಮಾರುಕಟ್ಟೆಗಳಲ್ಲಿ ಸಿಗುತ್ತಿರುವ ವಿಷಯುಕ್ತ ಕಲಬೆರಕೆ ಎಣ್ಣೆಯನ್ನು ತಿರಸ್ಕರಿಸಿ, ನಮ್ಮ ಪರಂಪರೆಯನುಸಾರ ಪೂರ್ವಿಕರಂತೆ ಗಾಣದ ಎಣ್ಣೆ ಬಳಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳುವ ದೃಢ ನಿರ್ಧಾರ ಹಾಗೂ ಸಂಕಲ್ಪ ಇಂದಿನ ಅವಶ್ಯಕತೆಯಾಗಿದೆ. ಈ ಮೂಲಕ ಸದೃಢ ದೇಶ ಕಟ್ಟುವಲ್ಲಿ, ದೇಶದ ಅಭಿವೃದ್ಧಿಯಲ್ಲಿ ಎಲ್ಲರೂ ಕೈಜೋಡಿಸಬೇಕಿದೆ.

****

## ಆಡು ಮತ್ತು ಕುರಿಗಳಲ್ಲಿ ಪಿ.ಪಿ.ಆರ್. ರೋಗದ ನಿರ್ವಹಣೆ

ಈ ರೋಗವು ಪ್ಯಾರಮಿಕ್ಸೊ ವೈರಸ್ ಗುಂಪಿಗೆ ಸೇರಿದ "ಮಾರ್ಬಿಲಿ" ಎಂಬ ಸೂಕ್ಷ್ಮ ವೈರಾಣುಗಳಿಂದ ಕುರಿ ಮತ್ತು ಆಡುಗಳಲ್ಲಿ ಕಂಡುಬರುವುದು. ಈ ರೋಗವು ಧೂಳು ಮತ್ತು ಶುಷ್ಕ ವಾತಾವರಣಗಳಲ್ಲಿ ಅಥವಾ ರೋಗಗ್ರಸ್ತ ಕುರಿ, ಆಡುಗಳ ಮಲಮೂತ್ರದ ನೇರ ಸಂಪರ್ಕದಿಂದ ಬರುವ ಅಂಟು ರೋಗವಾಗಿದ್ದು, ರೋಗದ ಅವಧಿ 4 ರಿಂದ 10 ದಿನಗಳಾಗಿರುತ್ತದೆ.

➢**ರೋಗದ ಚಿಹ್ನೆಗಳು** : ವಿಪರೀತ ಜ್ವರ 104–1060 ಫೆ. ಕಣ್ಣು ಮತ್ತು ಮೂಗಿನಿಂದ ಹಳದಿ ಕೀವು ಮಿಶ್ರಿತ ಲೋಳೆ ಕಾಣಿಸಿ, ಕುರಿ, ಆಡು ಮೇವು ಬಿಟ್ಟು ನಿಶ್ಯಕ್ತಿಯಿಂದ ಮಂಕಾಗುತ್ತವೆ. ಮೂಗಿನ ಹೊಳ್ಳೆಗಳೊಳಗೆ ಗಾಯವಾಗಿ, ಲೋಳೆ ಪೊರೆ ಕೊಳೆತು ವಾಸನೆಯಿಂದ ಕೂಡಿರುತ್ತದೆ. 3–4 ದಿನಗಳ ನಂತರ ತುಟಿ, ವಸಡು, ದವಡೆಗಳಲ್ಲಿನ ಲೋಳೆ ಪೊರೆಯು ಗಾಯವಾಗಿ, ಕೆಲವೊಮ್ಮೆ ನಾಲಿಗೆ ಮೇಲೆ ಹುಣ್ಣುಗಳಾಗಿ, ಬಿರುಕುಬಿಟ್ಟು ಕೊಳೆತು ಉದುರಿ ಹೋಗುವಂತಾಗುತ್ತದೆ. ಬಾಯಿಯಿಂದ ಧಾರಾಕಾರವಾಗಿ ಕೀವು ಮಿಶ್ರಿತ ನೊರೆಯುಕ್ತ ಜೊಲ್ಲು ಸೋರುತ್ತಿರುತ್ತದೆ.

➢**ನಿರ್ವಹಣೆ** : ರೋಗಗ್ರಸ್ತ ಪ್ರಾಣಿಗಳನ್ನು ಬೇರ್ಪಡಿಸಿ ಪೋಟ್ಯಾಷಿಯಂ ಪರಮಾಂಗನೇಟ್ ದ್ರಾವಣದಿಂದ ಮೂಗು ಮತ್ತು ಬಾಯಿಯನ್ನು ಶುಚಿಗೊಳಿಸಬೇಕು. ಅವು ವಾಸಿಸುವ ಜಾಗವನ್ನು ಸೂಕ್ತವಾದ ಕ್ರಿಮಿನಾಶಕ ಸಿಂಪಡಿಸಿ ಚೊಕ್ಕವಾಗಿಡಬೇಕು. ನೋವು ನಿವಾರಕ, ಜ್ವರ ನಿಯಂತ್ರಕ ಹಾಗೂ ಆ್ಯಂಟಿಬಯೋಟಿಕ್ಸ್‌ನಿಂದ ಔಷಧೋಪಚಾರ ಮಾಡಿಸಬೇಕು. ರೋಗಗ್ರಸ್ತ ಪ್ರಾಣಿಗಳನ್ನು ಹೊರಗಡೆ ಮೇಯಲು ಬಿಡದೇ ಮೆತ್ತನೆಯ ಆಹಾರವಾದ ಗಂಜಿ, ಅಂಬಲಿ ಹಾಗೂ ಹುಲ್ಲು ಕೊಡಬೇಕು. ಪಿ.ಪಿ.ಆರ್. ರೋಗದ ಲಸಿಕೆ ಹಾಕುವುದರಿಂದ ಈ ರೋಗವನ್ನು ತಡೆಗಟ್ಟಬಹುದು. ಕುರಿ/ಮೇಕೆಗಳಿಗೆ ವರ್ಷಕ್ಕೆ 2–3 ಸಲ ಜಂತಿನ ಔಷಧಿ ಹಾಕಿಸುವುದು ಸೂಕ್ತ. 3 ಅಡಿ ಆಳ ಮತ್ತು ಅಗಲದ ಹಾಗೂ 5 ಅಡಿ ಉದ್ದ ಸಿಮೆಂಟಿನ ಗುಂಡಿಯನ್ನು ಮಾಡಿ ಅದರಲ್ಲಿ ನೀರು ತುಂಬಿ ಸರಿಯಾದ ಪ್ರಮಾಣದಲ್ಲಿ ಕ್ರಿಮಿನಾಶಕ ಔಷಧಿಯನ್ನು ಕರಗಿಸಿ, ಕುರಿಗಳನ್ನು ಅದರಲ್ಲಿ ಈಜಲು ಬಿಡಬೇಕು.

– ವಿಸ್ತರಣಾ ನಿರ್ದೇಶಕರು